VK
ವಿಜಯ ಕರ್ನಾಟಕ
e-paper

# ರೇವಾ ವಿವಿಯಲ್ಲಿ ಸಂಸ್ಥಾಪನಾ ದಿನಾಚರಣೆ

## ಸಾಧಕರಿಗೆ ರೇವಾ ಜೀವಮಾನ ಸಾಧನೆ ಪ್ರಶಸ್ತಿ

**ಬೆಂಗಳೂರು:** ನೈತಿಕತೆ, ಶಿಸ್ತು, ಕಠಿಣ ಪರಿಶ್ರಮ, ಹಿರಿಯರಿಗೆ ಗೌರವ ಮತ್ತು ಸವಾಲುಗಳನ್ನು ಎದುರಿಸುವ ಧೈರ್ಯ ನಮ್ಮನ್ನು ಪೋಷಿಸುತ್ತದೆ. ಈ ಗುಣಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕು. ಇದೇ ನೈಜ ಶಿಕ್ಷಣ ಎಂದು ರೇವಾ ವಿವಿ ಕುಲಪತಿ ಡಾ.ಪಿ. ಶ್ಯಾಮ ರಾಜು ಹೇಳಿದರು.




ಅವರು ಮಂಗಳವಾರ ರೇವಾ ವಿವಿ ಕ್ಯಾಂಪಸ್‌ನಲ್ಲಿ ನಡೆದ 'ಸಂಸ್ಥಾಪಕರ ದಿನ' ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು. ಶ್ಯಾಮರಾಜು ಅವರ ಜನ್ಮದಿನದ ಪ್ರಯುಕ್ತ 'ಸಂಸ್ಥಾಪಕರ ದಿನ' ಎಂಬ ವಾರ್ಷಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಆಂಧ್ರಪ್ರದೇಶದ ಸಣ್ಣ ಹಳ್ಳಿಯಲ್ಲಿ ಹುಟ್ಟಿ ಬೆಳೆದ ತಾನು ರೇವಾ ವಿವಿ ಸ್ಥಾಪನೆ ಮಾಡುವ ಹಂತದ ತನಕ ಬೆಳೆದು ಬಂದ ಬಗೆಯನ್ನು ಶ್ಯಾಮ ರಾಜು ಬಿಡಿಸಿಟ್ಟರು. ಶ್ರೇಷ್ಠತೆ ಮತ್ತು ಸೇವೆಯನ್ನು ಉತ್ಸಾಹದಿಂದ ಗುರುತಿಸುವ ಸಂಸ್ಥಾಪಕರ ದಿನದ ಮಹತ್ವವನ್ನು ತಿಳಿಸಿದರು.

ಇದೇ ಸಂದರ್ಭದಲ್ಲಿ ಏರ್‌ಚೀಫ್ ಮಾರ್ಷಲ್ ಫಾಲಿ ಎಚ್. ಮೇಜರ್, ಭಾರತೀಯ ರಾಜತಾಂತ್ರಿಕರು ಹಾಗೂ ಮಾಜಿ ವಿದೇಶಾಂಗ ಕಾರ್ಯದರ್ಶಿ ನಿರುಪಮಾ ಮೆನನ್ ರಾವ್, ಚಿತ್ರ ನಟಿ ಜಯಸುಧಾ ಅವರಿಗೆ ರೇವಾ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಸ್ವೀಕರಿಸಿದ ಏರ್‌ಚೀಫ್ ಮಾರ್ಷಲ್ ಫಾಲಿ ಎಚ್. ಮೇಜರ್ ''ನನ್ನ ಸಾಧನೆಗೆ ವೃತ್ತಿಪರತೆ, ಕಠಿಣ ಪರಿಶ್ರಮ ಮತ್ತು ಸೇವಾ ಬದ್ಧತೆಯೇ ಕಾರಣ ಎಂದರು. ಶಿಕ್ಷಣವು ವೃತ್ತಿಪರ ಮಹತ್ವಾಕಾಂಕ್ಷೆ ಮಾತ್ರವಲ್ಲ, ಆಳವಾದ ಹೊಣೆಗಾರಿಕೆಯನ್ನೂ ಬೆಳೆಸಬೇಕು,'' ಎಂದು ನಿರುಪಮಾ ಮೆನನ್ ರಾವ್ ಕರೆ ನೀಡಿದರು.